10. -ಡಿಟೋ-	12,494 ಚ.ಮೀ.
11. -ಡಿಟೋ-	87,954 ಚ.ಮೀ.
12. -ಡಿಟೋ-	25,280 ಚ.ಮೀ.
13. -ಡಿಟೋ-	8596.5 ಚ.ಮೀ.
14. -ಡಿಟೋ-	7,500 ಚ.ಮೀ.
15. ಖಿಲ್ಲೆ ಮೊಹಲ್ಲಾ	14,000 ಚ.ಮೀ.
16. -ಡಿಟೋ-	72,400 ಚ.ಮೀ.
17. ಮಂಡಿಮೊಹಲ್ಲಾ	2,88,750 ಚ.ಮೀ.

ಇ) ಮಾರಾಟ ಮಾಡಿಲ್ಲ.

ಈ) ಸರ್ಕಾರವು ಹಣವನ್ನು ಬಿಡುಗಡೆ ಮಾಡಿಲ್ಲ.

ಉ) ಪ್ರಸ್ತಾವನೆ ಇಲ್ಲ.

ಹತ್ತಿ ಬೆಳೆಗೆ ಹುಳುಗಳಿಂದ ಆದ ತೊಂದರೆ

1268 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಹತ್ತಿ ಬೆಳೆಗೆ ಹುಳುಗಳಿಂದ ಆದ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಆದರ ನಿವಾರಣೆಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಬಂದಿದೆ.

ಆ) ಹತ್ತಿ ಬೆಳೆಯಲ್ಲಿ ಕಂಡುಬಂದ ಹುಳುಗಳನ್ನು ತಡೆಗಟ್ಟಲು ರೈತರಿಗೆ ಸಕಾಲದಲ್ಲಿ ಸೂಕ್ತ ತಿಳುವಳಿಕೆಯನ್ನು ರೇಡಿಯೋ ಸ್ಥಳೀಯ ಪತ್ರಿಕೆಗಳು, ಹಸ್ತ ಪ್ರತಿಗಳನ್ನು ಹಂಚಿಕೆ, ಮುಂತಾದ ಸಮೂಹ ಮಾಧ್ಯಮಗಳ ಮುಖಾಂತರ ನೀಡಲಾಯಿತು. ಇದಲ್ಲದೆ, ಸಣ್ಣ, ಅತೀ ಸಣ್ಣ, ಹರಿಜನ ಮತ್ತು ಗಿರಿಜನ ರೈತರಿಗೆ ಪ್ರಾಧಾನ್ಯತೆ ನೀಡಿ ಕೀಟನಾಶಕಗಳನ್ನು ಶೇ 25ರ ರಿಯಾಯಿತಿಯಲ್ಲಿ ಸರಬರಾಜು ಮಾಡಿ 1400 ಹೆಕ್ಟೇರು ಪ್ರದೇಶದಲ್ಲಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಬೀದರ್ ಜಿಲ್ಲೆ ಕಾರಂಜಾ ಮುಳುಗಡೆ ಪ್ರದೇಶದ ನಿರುದ್ಯೋಗಿಗಳ ಸಮಸ್ಯೆ

1271 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜ ಯೋಜನೆಯಲ್ಲಿ ಆಸ್ತಿ ಕಳೆದುಕೊಂಡ ನಿರುದ್ಯೋಗಿಗಳು ದಿನಾಂಕ 10-1-91 ರಂದು ಉಪವಾಸ ಸತ್ಯಾಗ್ರಹ ಹೂಡಿದ್ದು, ದಿನಾಂಕ 11-1-91ರಂದು ಸ್ಥಳಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಬೇಟಿಕೊಟ್ಟು ಸಮರ್ಥನೀಯ ಪರಿಹಾರ ದೊರಕಿಸಿಕೊಡುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದರ ಬಗ್ಗೆ, ಯಾವ ಕ್ರಮ ಕೈಗೊಂಡಿದ್ದೀರಿ.?

ಆ) ಕ್ರಮ ತೆಗೆದುಕೊಳ್ಳದಿದ್ದರೆ ಈಗ ಅವರಿಗೆ ವಿಶೇಷ ಆಜ್ಞೆ ತೆಗೆದುಕೊಂಡು ಆ 15 ಜನ ನಿರ್ಗತಿಕರಿಗೆ ನೌಕರಿ ಕೊಡುವಿರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಪರಿಶೀಲಿಸಲಾಗುವುದೆಂದು ತಿಳಿಸಿದ್ದೆ. ಸಂಬಂಧಪಟ್ಟವರೊಡನೆ ಚರ್ಚಿಸಲಾಗಿದೆ.

ಅ) ನಿಯಮಗಳ ಪ್ರಕಾರ ಉದ್ಯೋಗಾವಕಾಶ ಕಳಿಸಲು ಸದ್ಯಕ್ಕೆ ಅವಕಾಶವಿಲ್ಲ. ಮುಳುಗಡೆಯಾದ ಗ್ರಾಮಗಳ ನಿವಾಸಿಗಳಿಗೆ ಪುನರ್ವಸತಿ ಕಾರ್ಯ ಕೈಗೊಳ್ಳಲಾಗಿದೆ.

ಹಾಸನ ಜಿಲ್ಲೆಗೆ ಬರಪರಿಹಾರ ಧನದ ಬಗ್ಗೆ.

1276 - ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಬರಪರಿಹಾರಕ್ಕಾಗಿ ಹಾಸನ ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಯಾವ ಯಾವ ಕ್ಷೇತ್ರಕ್ಕೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಯಿತು?

ಇ) ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಎಷ್ಟು ಹಳ್ಳಿಗಳು ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸಲಾಗಿತ್ತು?

ಈ) ಅವುಗಳಲ್ಲಿ ಕುಡಿಯುವ ನೀರಿಗಾಗಿ ಬೇಡಿಕೆಯಿದ್ದ ಹಳ್ಳಿಗಳ ಸಂಖ್ಯೆ ಎಷ್ಟು?

ಉ) ಕುಡಿಯುವ ನೀರಿಗಾಗಿ ಪ್ರತಿ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಊ) ಜನರಿಗೆ ಕೆಲಸ ಒದಗಿಸಲು ಪ್ರತಿ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರೂ. 2,06,982.

ಆ) ಅನುಬಂಧ 'ಅ' ನಲ್ಲಿ ನೀಡಿದೆ.

ಇ) ಐದು ತಾಲ್ಲೂಕಿನ ಒಟ್ಟು 842 ಹಳ್ಳಿಗಳನ್ನು ಅಭಾವಕ್ಕೊಳಗಾದ ಗ್ರಾಮಗಳೆಂದು ಗುರುತಿಸಲಾಗಿದೆ.

ಈ) 196 ಹಳ್ಳಿಗಳು.

ಉ) ಕುಡಿಯುವ ನೀರಿನ ಪೂರೈಕೆಗಾಗಿ ತಾಲ್ಲೂಕುವಾರು ಹಣ ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

1. ಅರಸೀಕೆರೆ	ರೂ. 15.61
2. ಚನ್ನರಾಯಪಟ್ಟಣ	ರೂ. 2.39
3. ಸಕಲೇಶಪುರ	ರೂ. 0.50
4. ಬೇಲೂರು	ರೂ. 3.36
5. ಹಾಸನ	ರೂ. 53.93

ಊ) 1. ಹಾಸನ ಕ್ಷೇತ್ರಕ್ಕೆ

1. ಹಾಸನ ಕ್ಷೇತ್ರಕ್ಕೆ	ರೂ. 9,90,640-60
2. ಗಂಡಸಿ ಕ್ಷೇತ್ರಕ್ಕೆ	ರೂ. 22,52,087-00
3. ಅರಕಲಗೂಡು	ರೂ. 6,25,000-00
4. ಅರಸೀಕೆರೆ ಕ್ಷೇತ್ರಕ್ಕೆ	ರೂ. 16,14,713-00
5. ಹೊಳೆನರಸೀಪುರ	ರೂ. 11.30,040-00
6. ಚನ್ನರಾಯಪಟ್ಟಣ	ರೂ. 11,59,866-00
7. ಬೇಲೂರು	ರೂ. 5,88,252-00